## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ ಜೇವರ್ಗಿ

## ಸಿ.ಸಿ.ನಂಃ 392/2022

| | | |
|---|---|---|
| ಪಿರ್ಯಾದಿದಾರಃ | 1. | ಕರ್ನಾಟಕ ರಾಜ್ಯದ ಪರ ಜೇವರ್ಗಿ ಪೋಲಿಸರು |
| | | **ವಿರುದ್ಧ** |
| ಆರೋಪಿತರುಃ | 1. | ಶಂಕರಗೌಡ ತಂದೆ ಮಲ್ಲೇಶಪ್ಪಗೌಡ ಪೊಲೀಸ್ ಪಾಟೀಲ, 48 ವರ್ಷ, ಉಃ ಒಕ್ಕಲುತನ, ವಾಸಃ ಹಾಲಗಡ್ಲಾ ಗ್ರಾಮ, ತಾಃ ಜೇವರ್ಗಿ, ಜಿಃ ಕಲಬುರಗಿ. |
| | 2. | ಶಾಂತಗೌಡ ತಂದೆ ಸಿದ್ದಣ್ಣ ಗೌಡ ಐನಾಪೂರ, 60 ವರ್ಷ, ಉಃ ಒಕ್ಕಲುತನ, ವಾಸಃ ಹಾಲಗಡ್ಲಾ ಗ್ರಾಮ, ತಾಃ ಜೇವರ್ಗಿ, ಜಿಃ ಕಲಬುರಗಿ. |
| | 3. | ಭೀಮಣ್ಣಗೌಡ ತಂದೆ ಶಾಂತಗೌಡ ಐನಾಪೂರ, 38 ವರ್ಷ, ಉಃ ಒಕ್ಕಲುತನ, ವಾಸಃ ಹಾಲಗಡ್ಲಾ ಗ್ರಾಮ, ತಾಃ ಜೇವರ್ಗಿ, ಜಿಃ ಕಲಬುರಗಿ. |

## ದೋಷಾರೋಪಣೆ

ಸಂದೀಪ್.ಎ.ನಾಯಿಕ್ ಬಿ.ಎ., ಎಲ್‌ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ನಾನು, ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕಃ 30-05-2021 ರಂದು ಸಂಜೆ 07:45 ಗಂಟೆ ಸಮಯದಲ್ಲಿ ಜೇವರ್ಗಿ ಪೋಲಿಸ ಠಾಣಾ ವ್ಯಾಪ್ತಿಯ ಕೆಲ್ಲೂರ ಗ್ರಾಮದ ಚಾಸಾ-1 ರವರ ಜಮೀನು ಸ.ನಂ.104 ರಲ್ಲಿ ಆರೋಪಿತರಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಹೊಲದಲ್ಲಿನ ಕಾಲುದಾರಿಯ ವಿಚಾರವಾಗಿ ಜಗಳ ತೆಗೆದು, ಚಾಸಾ-1 ರವರ ಜಮಿನಿನಲ್ಲಿ ಅಕ್ರಮ ಪ್ರವೇಶ ಮಾಡಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 447 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ–1 ರವರೊಂದಿಗೆ ಹೊಲದಲ್ಲಿನ ಕಾಲುದಾರಿಯ ವಿಚಾರವಾಗಿ ಜಗಳ ತೆಗೆದು, ಆರೋಪಿತರಾದ ನೀವುಗಳು ಚಾಸಾ–1 ರವರ ಜಮೀನು ಸ.ನಂ.104 ರಲ್ಲಿ ಹಾಕಿದ್ದ 92 ಸಿಮೆಂಟ್ ಕಂಬಗಳನ್ನು ಟ್ರ್ಯಾಕ್ಟರ್ ನಂ.ಕೆಎ–20 ಟಿಬಿ–4105 ನೆದ್ದರಿಂದ 92 ಸಿಮೆಂಟ್ ಕಂಬಗಳನ್ನು ಮುರಿದು ಜಖಂ ಮಾಡಿ ಚಾಸಾ–1 ರವರಿಗೆ (1,50,000) ಒಂದು ಲಕ್ಷ ಐವತ್ತು ಸಾವಿರ ರೂಪಾಯಿಯನ್ನು ಹಾನಿವುಂಟು ಮಾಡಿದ ಕಾರಣ, ಭಾರತೀಯ ದಂಡ ಸಂಹಿತೆ ಕಲಂ 427 ಸಹಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೇಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ–1 ರವರೊಂದಿಗೆ ಹೊಲದಲ್ಲಿನ ಕಾಲುದಾರಿಯ ವಿಚಾರವಾಗಿ ಜಗಳ ತೆಗೆದು, ಆರೋಪಿತರಾದ ನೀವುಗಳು ಚಾಸಾ–1 ರವರಿಗೆ ಎಲೆ ಮಗನೇ ನಾನು ಶೆಂಟಾ ತಿಳ್ಕೋಳ್ಳಲ್ಲಾ ಕೋರ್ಟ್ ಕಚೇರಿ ನನ್ನ ಮುಂದೆ ನಡೆಯುವುದಿಲ್ಲ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ನಿಂದಿಸಿ ಅವಮಾನವನ್ನುಂಟು ಮಾಡಿ ಚಾಸಾ–1 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ–1 ರವರನ್ನು ಉದ್ರೇಕಿಸಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೇಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ–1 ರವರೊಂದಿಗೆ ಹೊಲದಲ್ಲಿನ ಕಾಲುದಾರಿಯ ವಿಚಾರವಾಗಿ ಜಗಳ ತೆಗೆದು, ಅಕ್ರಮವಾಗಿ ಚಾಸಾ–1 ರವರನ್ನು ತಡೆದು ನಿಲ್ಲಿಸಿ ಮುಂದೆ ಹೋಗದಂತೆ ಅಕ್ರಮ ಪ್ರತಿಬಂಧನವನ್ನುಂಟು ಮಾಡಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಐದನೇಯದಾಗಿ, ಅ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ–1 ರವರೊಂದಿಗೆ ಹೊಲದಲ್ಲಿನ ಕಾಲುದಾರಿಯ ವಿಚಾರವಾಗಿ ಜಗಳ ತೆಗೆದು, ಆರೋಪಿರಾದ ನೀವು ಚಾಸಾ–1 ರವರ ಕೈಗಳನ್ನು ಹಿಂದೆ ತಿರುವಿ ಹಗ್ಗದಿಂದ ಕಟ್ಟಿ ಎರಡೂ ಕಣ್ಣುಗಳಿಗೆ ಕರವಸ್ತ್ರದಿಂದ ಕಟ್ಟಿ 2 ನೇ ಆರೋಪಿ ಚಾಸಾ–1 ರವರ ಎರಡೂ

ಕಾಲುಗಳನ್ನು ಕಟ್ಟಿ 1 ನೇ ಆರೋಪಿ ಕಾಲಿನಿಂದ ಚಾಸಾ-1 ರವರ ಕಾಲಿಗೆ ಒದ್ದು ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ, ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಹೊಲದಲ್ಲಿನ ಕಾಲುದಾರಿಯ ವಿಚಾರವಾಗಿ ಜಗಳ ತೆಗೆದು, 1 ನೇ ಆರೋಪಿ ಚಾಸಾ-1 ರವರಿಗೆ ನಿನ್ನ ಕುಟುಂಬ ನಾಶ ಮಾಡುತ್ತೇನೆ, ನಿನ್ನ ಹಿರಿಯ ಮಗ ಒಗ್ಷ್ಪನನ್ನು ಖಲಾಸ್ ಮಾಡುತ್ತೇನೆ, ಇದೇ ಜಮೀನಿನ ಶೆಡ್ಡಿನಲ್ಲಿ ಹಾಕಿ ಬೆಂಕಿ ಹಚ್ಚಿ ಸುಟ್ಟು ಬಿಡುತ್ತೇನೆ ಎಂದು ಜೀವ ಬೆದರಿಕೆ ಹಾಕಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಗೆ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

(ಸಂದೀಪ್.ಎ.ನಾಯಿಕ್)

ದಿಃ 09-08-2023

ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜೇವರ್ಗಿ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ**
**ಜೇವರ್ಗಿ**

**ಸಿ.ಸಿ.ನಂಃ 392/2022**

| | | |
|---|---|---|
| ಪಿರ್ಯಾದಿದಾರಃ | 1. | ಕರ್ನಾಟಕ ರಾಜ್ಯದ ಪರ ಜೇವರ್ಗಿ ಪೋಲಿಸರು |
| | | **ವಿರುದ್ಧ** |
| ಆರೋಪಿ | 1. | ಶಂಕರಗೌಡ ತಂದೆ ಮಲ್ಲೇಶಪ್ಪಗೌಡ ಪೊಲೀಸ್ ಪಾಟೀಲ, 48 ವರ್ಷ, ಉಃ ಒಕ್ಕಲುತನ, ವಾಸಃ ಹಾಲಗಡ್ಲಾ ಗ್ರಾಮ, ತಾಃ ಜೇವರ್ಗಿ, ಜಿಃ ಕಲಬುರಗಿ. |

**ದೋಷಾರೋಪಣೆ**

ಪ್ರಶ್ನೆ.1:- ಮೇಲ್ಕಂಡ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಉತ್ತರ:-

ಪ್ರಶ್ನೆ.2:- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರ:-

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ಈ ದಿನ ದಿಃ 09-08-2023 ರಂದು ದೃಢೀಕರಿಸುತ್ತೇನೆ.

ಸ್ಥಳಃಜೇವರ್ಗಿ
ದಿನಾಂಕ:-09-08-2023

(ಸಂದೀಪ್.ಎ.ನಾಯಿಕ್)
ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ.

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ
## ಜೇವರ್ಗಿ

### ಸಿ.ಸಿ.ನಂಃ 392/2022

| | | |
|---|---|---|
| ಪಿರ್ಯಾದಿದಾರಃ | 1. | ಕರ್ನಾಟಕ ರಾಜ್ಯದ ಪರ ಜೇವರ್ಗಿ ಪೋಲಿಸರು |
| | | **ವಿರುದ್ಧ** |
| ಆರೋಪಿ | 2. | ಶಾಂತಗೌಡ ತಂದೆ ಸಿದ್ದಣ್ಣ ಗೌಡ ಐನಾಪೂರ, 60 ವರ್ಷ, ಉಃ ಒಕ್ಕಲುತನ, ವಾಸಃ ಹಾಲಗಡ್ಲಾ ಗ್ರಾಮ, ತಾಃ ಜೇವರ್ಗಿ, ಜಿಃ ಕಲಬುರಗಿ. |

### ದೋಷಾರೋಪಣೆ

ಪ್ರಶ್ನೆ.1:- ಮೇಲ್ಕಂಡ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಉತ್ತರ:-

ಪ್ರಶ್ನೆ.2:- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರ:-

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ಈ ದಿನ ದಿಃ 09-08-2023 ರಂದು ದೃಢೀಕರಿಸುತ್ತೇನೆ.

ಸ್ಥಳಃಜೇವರ್ಗಿ
ದಿನಾಂಕ:-09-08-2023

(ಸಂದೀಪ್.ಎ.ನಾಯಿಕ್)
ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ**
**ಜೇವರ್ಗಿ**

**ಸಿ.ಸಿ.ನಂಃ 392/2022**

ಪಿರ್ಯಾದಿದಾರಃ 1. ಕರ್ನಾಟಕ ರಾಜ್ಯದ ಪರ ಜೇವರ್ಗಿ ಪೋಲಿಸರು

**ವಿರುದ್ಧ**

ಆರೋಪಿ 3. ಭೀಮಣ್ಣಗೌಡ ತಂದೆ ಶಾಂತಗೌಡ ಐನಾಪೂರ,
38 ವರ್ಷ, ಉಃ ಒಕ್ಕಲುತನ, ವಾಸಃ ಹಾಲಗಡ್ಲಾ ಗ್ರಾಮ,
ತಾಃ ಜೇವರ್ಗಿ, ಜಿಃ ಕಲಬುರಗಿ.

**ದೋಷಾರೋಪಣೆ**

ಪ್ರಶ್ನೆ.1:- ಮೇಲ್ಕಂಡ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಉತ್ತರ:-

ಪ್ರಶ್ನೆ.2:- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರ:-

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ಈ ದಿನ ದಿಃ 09-08-2023 ರಂದು ದೃಢೀಕರಿಸುತ್ತೇನೆ.

ಸ್ಥಳಃಜೇವರ್ಗಿ (ಸಂದೀಪ್.ಎ.ನಾಯಿಕ್)
ದಿನಾಂಕ:-09-08-2023 ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ.